## ಐರಿನಾ ಶುವಾಲೊವಾ
## ಸಂದರ್ಶನ

◆ **ಉಕ್ರೇನಿನ ಸಾರ್ವಜನಿಕ ಜೀವನದಲ್ಲಿ ಹೆಣ್ಣುಮಕ್ಕಳ ಪಾಲುದಾರಿಕೆ ಯಾವ ರೀತಿ ಇದೆ ?**

ಉಕ್ರೇನಿನಲ್ಲಿ ಮಹಿಳೆಯರ ವಿಮೋಚನೆಯು 19ನೇ ಶತಮಾನದ ಉತ್ತರಾರ್ಧದಲ್ಲಿ ಆರಂಭವಾಯಿತಾದರೂ ಅದು ಬಹಳ ಸೀಮಿತವಾಗಿತ್ತು. ಅಂದರೆ ಹೆಚ್ಚಾಗಿ ಉನ್ನತ ವರ್ಗದ, ನಗರಗಳಲ್ಲಿ ವಾಸಿಸುವ ಮಹಿಳೆಯರು ಮತ್ತು ಸ್ವಂತಕ್ಕೆ ಸಮಯ ಮತ್ತು ಸಂಪನ್ಮೂಲಗಳನ್ನು ಹೊಂದಿದ್ದವರು ಮಾತ್ರ ಶಿಕ್ಷಣವನ್ನು ಪಡೆಯಲು ಸಾಧ್ಯವಾಗುತ್ತಿತ್ತು. ಅದು ಕೂಡ ಹೆಚ್ಚಾಗಿ tutorship ಮತ್ತು ವಿದೇಶ ಪ್ರಯಾಣದ ಮೂಲಕ. ಅದೇ ಸಂದರ್ಭದಲ್ಲಿ, ಗ್ರಾಮೀಣ ಪ್ರದೇಶದ ಮಹಿಳೆಯರು ಇನ್ನೂ ಸಾಂಪ್ರದಾಯಿಕ ಸಮಾಜದಲ್ಲೇ ಜೀವಿಸುತ್ತಿದ್ದರು. ಆದಾಗ್ಯೂ, ಬೇರೆ ಕಡೆಗೆ ಹೋಲಿಸಿದರೆ ಉಕ್ರೇನಿನಲ್ಲಿ ಮಹಿಳೆಯರು ಮೊದಲಿನಿಂದಲೂ ಹೆಚ್ಚಿನ ಸಾಮಾಜಿಕ ಸ್ವಾತಂತ್ರ್ಯವನ್ನು ಹೊಂದಿದ್ದರು ಎಂದು ಹೇಳಲೇಬೇಕು. ಅವರಿಗೆ ಮಕ್ಕಳು ಮತ್ತು ಮನೆಯ ಜವಾಬ್ದಾರಿಗಳ ಜೊತೆಗೆ ಸಾರ್ವಜನಿಕ ಬದುಕಿನಲ್ಲಿ, ಇತರ ಪುರುಷರು ಮತ್ತು ಮಹಿಳೆಯರೊಂದಿಗೆ ಸಾಕಷ್ಟು ಮುಕ್ತವಾಗಿ ಒಡನಾಡುವ ಅವಕಾಶವಿತ್ತು. ಉದಾಹರಣೆಗೆ ಸಾರ್ವಜನಿಕ ಸ್ಥಳಗಳಲ್ಲಿ ಹಾಡುಗಾರಿಕೆ, ನೃತ್ಯ ಅಥವಾ ಮದ್ಯಪಾನವನ್ನು ಆನಂದಿಸುವ ಅವಕಾಶವಿತ್ತು. ಮಹಿಳೆಯರ ಜೀವನವನ್ನು ನಿಯಂತ್ರಿಸುವ ಕಠಿಣ ನಿಯಮಗಳು ಮತ್ತು ನಿರೀಕ್ಷಿತ ಸಾಮಾಜಿಕ ನಡಾವಳಿಗಳು ಕೂಡ ಇದ್ದವು. ಅವಿಭಕ್ತ ಕುಟುಂಬಗಳು ಇರೋದು ಹೊರೆಯಾಗಿ ಮಹಿಳೆಯರ ಅವಕಾಶಗಳನ್ನು ಸೀಮಿತಗೊಳಿಸುತ್ತಿದ್ದವು. ಆದರೂ ಸ್ಥಿತಿವಂತರಿಗೆ ವೈಯಕ್ತಿಕ ಸ್ವಾತಂತ್ರ್ಯ ಸ್ವಲ್ಪ ಹೆಚ್ಚಿಗೇ ಇತ್ತು. ಸೋವಿಯತ್ ಕಾಲವನ್ನೂ ಒಳಗೊಂಡಂತೆ, 20ನೇ ಶತಮಾನದಲ್ಲಿ ಮಹಿಳೆಯರಿಗೆ ಅವಕಾಶಗಳು ಮೊದಲಿಗೆ ನಗರಗಳಲ್ಲಿ, ನಂತರ ಕ್ರಮೇಣ ಗ್ರಾಮೀಣ ಪ್ರದೇಶಗಳಲ್ಲೂ ಹೆಚ್ಚಾಗತೊಡಗಿದವು. ಸಾಕ್ಷರತೆಯನ್ನು ಪಡೆದ ಹೆಣ್ಣುಮಕ್ಕಳು ಉನ್ನತ ಶಿಕ್ಷಣಕ್ಕೆ ತೆರೆದುಕೊಂಡರು. ಅವರಿಗೆ ಪ್ರಾತಿನಿಧ್ಯ ಕಡಿಮೆ ಇದ್ದ ಕ್ಷೇತ್ರಗಳಲ್ಲಿ ಕೆಲಸಕ್ಕೂ ಪ್ರವೇಶಿಸಿ, ಸೀಮಿತವಾದರೂ ನಾಯಕತ್ವದ ಜವಾಬ್ದಾರಿಗಳನ್ನೂ ಪಡೆದುಕೊಂಡರು. ಸಂತಾನ ನಿಯಂತ್ರಣ, ಉತ್ತಮ ಆರೋಗ್ಯ ರಕ್ಷಣೆ ಮತ್ತು ಮಕ್ಕಳ ಆರೈಕೆಯ ಲಭ್ಯತೆಯು ಸೋವಿಯತ್ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವನ್ನು ಮತ್ತಷ್ಟು ಸುಧಾರಿಸಿತು. ಆದರೂ, ರಾಜಕೀಯ ಪರಮಾಧಿಕಾರವು, ವಿಶೇಷವಾಗಿ ಉನ್ನತ ಹಂತದಲ್ಲಿ ಹೆಚ್ಚಾಗಿ ಪುರುಷರ ಕೈಯಲ್ಲೇ ಇತ್ತು. ಇಂದಿನ ಉಕ್ರೇನ್‌ನಲ್ಲಿ ಹೆಣ್ಣುಮಕ್ಕಳು, ವಿಶೇಷವಾಗಿ ಯುವ ಪೀಳಿಗೆ ಸ್ವತಂತ್ರರೂ ಮತ್ತು ಮಹತ್ವಾಕಾಂಕ್ಷಿಗಳು ಆಗಿದ್ದಾರೆ. ಇಷ್ಟಾದರೂ ಲಿಂಗ ತಾರತಮ್ಯ ಮತ್ತು ಸ್ತ್ರೀ ಅವಹೇಳನ ಪ್ರತಿದಿನವೂ ಎದುರಿಸಬೇಕಾದ ಸವಾಲುಗಳಾಗಿವೆ. ಒಂದು ಮಟ್ಟದಲ್ಲಿ ಹೇಳುವುದಾದರೆ ಯುದ್ಧವು ಈ ಪ್ರಕ್ರಿಯೆಯನ್ನು ವೇಗಗೊಳಿಸಿದೆ. ಏಕೆಂದರೆ ಯುದ್ಧಕ್ಕೂ ಮೊದಲು ಹೋಲಿಸಿದರೆ ಈಗ ಸಶಸ್ತ್ರ ಪಡೆಗಳಲ್ಲಿ, ವಿಶೇಷವಾಗಿ ಕಾಳಗದ ಮುಂಚೂಣಿಯಲ್ಲಿ ಮಹಿಳೆಯರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಇದು ಸಹ ಉಕ್ರೇನಿಯನ್ ಸಮಾಜದಲ್ಲಿ ಹೆಣ್ಣುಮಕ್ಕಳು ಹೆಚ್ಚಿನ ಗೌರವ ಮತ್ತು ಸ್ವಾತಂತ್ರ್ಯವನ್ನು ಪಡೆಯಲು ಸಹಾಯ ಮಾಡುತ್ತಿದೆ.

◆ **ನಿತ್ಯದ ಜಂಜಾಟದಲ್ಲಿ ಒಳಗೂ ಹೊರಗೂ ದುಡಿಯುವವಳಾಗಿ ಹೆಣ್ಣು, ತನ್ನ ದೈಹಿಕ ಹಾಗೂ ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳುವುದು ಹೇಗೆ?**

ಸಮತೋಲನಕ್ಕಾಗಿ ಇವತ್ತಿನ ಸಮಾಜದಲ್ಲಿ ಎಲ್ಲರೂ ಹೆಣಗುತ್ತಿದ್ದಾರೆ. ಈಗಿರುವುದು ಅತೀ ವೇಗದ, ಸ್ಪರ್ಧಾತ್ಮಕ ಜಗತ್ತು. ನಾವು ಜವಾಬ್ದಾರಿಗಳನ್ನು ನಿರ್ವಹಿಸಲೇಬೇಕು, ಮಾಹಿತಿಗಳನ್ನು ತೆಗೆದುಕೊಳ್ಳಬೇಕು ಮತ್ತು ಜನರ ಜೊತೆ ಸಂವಹನ ಮಾಡಲೇಬೇಕು ಅನ್ನುವ Unrealistic ಬೇಡಿಕೆಗಳು ಹೇರಲ್ಪಡುತ್ತವೆ. ಇವೆಲ್ಲ ಸುಸ್ಥಿರವಾಗಿ ನಡೆಯುವುದಿಲ್ಲ. ಹೌದು, ಈ ಪ್ರಕ್ರಿಯೆಯಲ್ಲಿ ಮಹಿಳೆಯರಿಗೆ ಕೆಲವು